# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **492**

ವಿಧಾನ ಪರಿಷತ್ತು ಸದಸ್ಯರ ಹೆಸರು : ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ)

ಉತ್ತರಿಸಬೇಕಾದ ದಿನಾಂಕ : 10.07.2023

ಉತ್ತರಿಸುವ ಸಚಿವರು : ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ವಿಜಯಪುರ, ಬಾಗಲಕೋಟೆ, ಬೆಳಗಾವಿ ಜಿಲ್ಲೆಗಳಲ್ಲಿ ಅನ್ನಭಾಗ್ಯ ಯೋಜನೆಯಲ್ಲಿ ಕಳೆದ 6 ತಿಂಗಳಿನಲ್ಲಿ ಬಿಪಿಎಲ್, ಎಪಿಎಲ್ ಮತ್ತು ಅಂತ್ಯೋದಯ ಕಾರ್ಡುದಾರರಿಗೆ ವಿತರಿಸಿದ ಅಕ್ಕಿಯ ಪ್ರಮಾಣ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)</td><td>ವಿಜಯಪುರ, ಬಾಗಲಕೋಟೆ, ಬೆಳಗಾವಿ ಜಿಲ್ಲೆಗಳಲ್ಲಿ ಅನ್ನಭಾಗ್ಯ ಯೋಜನೆಯಲ್ಲಿ ಕಳೆದ 6 ತಿಂಗಳಲ್ಲಿ ವಿತರಿಸಿರುವ ಅಕ್ಕಿ ವಿತರಣಾ ಪ್ರಮಾಣದ ವಿವರ ಈ ಕೆಳಗಿನಂತಿದೆ.<br>(ಎಂ.ಟಿ.ಗಳಲ್ಲಿ)
<table>
<tr><th>ಜಿಲ್ಲೆಯ ಹೆಸರು</th><th>ಅಂತ್ಯೋದಯ ಪಡಿತರ ಚೀಟಿಗಳಿಗೆ ವಿತರಿಸಲಾದ ಅಕ್ಕಿಯ ಪ್ರಮಾಣ</th><th>ಆದ್ಯತಾ ಚೀಟಿಗಳಿಗೆ ವಿತರಿಸಲಾದ ಅಕ್ಕಿಯ ಪ್ರಮಾಣ</th><th>ಆದ್ಯತೇತರ ಚೀಟಿಗಳಿಗೆ ವಿತರಿಸಲಾದ ಅಕ್ಕಿಯ ಪ್ರಮಾಣ</th></tr>
<tr><td>ವಿಜಯಪುರ</td><td>7926.703</td><td>50059.02</td><td>0</td></tr>
<tr><td>ಬಾಗಲಕೋಟೆ</td><td>9199.670</td><td>42922.902</td><td>0</td></tr>
<tr><td>ಬೆಳಗಾವಿ</td><td>13799.923</td><td>118188.689</td><td>33.233</td></tr>
</table></td></tr>
<tr><td>ಆ</td><td>ರಾಜ್ಯದಲ್ಲಿ ಎಷ್ಟು ಎಪಿಎಲ್, ಬಿಪಿಎಲ್ ಮತ್ತು ಅಂತ್ಯೋದಯ ಕಾರ್ಡುಗಳಿವೆ; ಎಪಿಎಲ್, ಬಿಪಿಎಲ್ ಮತ್ತು ಅಂತ್ಯೋದಯ ಕಾರ್ಡ್ ಹೊಂದಿದವರಿಗೆ ವಿತರಿಸಲಾಗುವ ತಲಾ ಅಕ್ಕಿಯ ಪ್ರಮಾಣವೆಷ್ಟು;</td><td>ರಾಜ್ಯದಲ್ಲಿರುವ ಪಡಿತರ ಚೀಟಿಗಳ ವಿವರ ಈ ಕೆಳಕಂಡಂತಿದೆ.
<table>
<tr><td>ಅಂತ್ಯೋದಯ ಅನ್ನ ಯೋಜನೆ</td><td>1089990</td></tr>
<tr><td>ಆದ್ಯತಾ</td><td>11726296</td></tr>
<tr><td>ಆದ್ಯತೇತರ</td><td>2489436</td></tr>
</table>
ಪಡಿತರ ಚೀಟಿಯನ್ನು ಹೊಂದಿರುವ ಕುಟುಂಬಗಳಿಗೆ ವಿತರಿಸಲಾಗುತ್ತಿರುವ ಆಹಾರ ಧಾನ್ಯಗಳ ಪ್ರಮಾಣದ ಮಾಹಿತಿ ಈ ಕೆಳಕಂಡಂತಿದೆ.
<table>
<tr><th>ಪಡಿತರ ಚೀಟಿ ವರ್ಗ</th><th>ಅಕ್ಕಿ/ರಾಗಿ/ಜೋಳ (ಕೆ.ಜಿ.ಗಳಲ್ಲಿ)</th><th>ದರ ಪ್ರತಿ ಕೆ.ಜಿ (ರೂ.ಗಳಲ್ಲಿ)</th></tr>
<tr><td>ಅಂತ್ಯೋದಯ ಅನ್ನ ಯೋಜನೆ</td><td>ಪ್ರತಿ ತಿಂಗಳು 35 ಕೆ.ಜಿ. ಆಹಾರ ಧಾನ್ಯ</td><td>ಉಚಿತ</td></tr>
<tr><td>ಆದ್ಯತಾ</td><td>ಪಡಿತರ ಚೀಟಿಯಲ್ಲಿನ</td><td>ಉಚಿತ</td></tr>
</table></td></tr>
</table>

<table>
<tr>
<td></td>
<td></td>
<td>
<table>
<tr><td>ಕುಟುಂಬ</td><td>ಪ್ರತಿ ಫಲಾನುಭವಿಗೆ ಪ್ರತಿ ತಿಂಗಳು 05 ಕೆ.ಜಿ. ಆಹಾರ ಧಾನ್ಯ</td><td></td></tr>
<tr><td>ಆದ್ಯತೇತರ ಕುಟುಂಬ</td><td>ಏಕ ಸದಸ್ಯ ಪಡಿತರ ಚೀಟಿಗೆ 5ಕೆ.ಜಿ ಮತ್ತು ಎರಡು ಅಥವಾ ಹೆಚ್ಚಿನ ಸದಸ್ಯರಿರುವ ಪಡಿತರ ಚೀಟಿಗೆ 10 ಕೆ.ಜಿ. ಅಕ್ಕಿ</td><td>ರೂ.15/- ಪ್ರತಿ ಕೆ.ಜಿ.</td></tr>
</table>
2023ರ ಜುಲೈ ತಿಂಗಳಿಂದ ರಾಜ್ಯದಲ್ಲಿರುವ ಅಂತ್ಯೋದಯ ಅನ್ನ ಯೋಜನೆ ಮತ್ತು ಆದ್ಯತಾ ಪಡಿತರ ಚೀಟಿಗಳ ಪ್ರತಿ ಫಲಾನುಭವಿಗೆ ತಲಾ 10 ಕೆ.ಜಿ. ಆಹಾರ ಧಾನ್ಯವನ್ನು ಉಚಿತವಾಗಿ ವಿತರಿಸಲು ಆದೇಶಿಸಲಾಗಿದೆ.
ರಾಜ್ಯದಲ್ಲಿರುವ ಅಂತ್ಯೋದಯ ಅನ್ನ ಯೋಜನೆ ಮತ್ತು ಆದ್ಯತಾ ಪಡಿತರ ಚೀಟಿಯ ಪ್ರತಿ ಫಲಾನುಭವಿಗೆ ಪ್ರತಿ ತಿಂಗಳು 05 ಕೆ.ಜಿ. ಆಹಾರ ಧಾನ್ಯವನ್ನು ವಿತರಿಸಲು ಅಗತ್ಯವಿರುವ ಅಕ್ಕಿಯನ್ನು ಮುಕ್ತ ಮಾರುಕಟ್ಟೆಯಿಂದ ಖರೀದಿಸಲು, ಮುಕ್ತ ಟೆಂಡರ್‌ನ್ನು ಕರೆಯಲು ನಿರ್ಧರಿಸಲಾಗಿದೆ. ಸದರಿ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡು ಅಕ್ಕಿ ಸರಬರಾಜು ಆಗುವವರೆಗೆ 2023ರ ಜುಲೈ ಮಾಹೆಯಿಂದ ಜಾರಿಗೆ ಬರುವಂತೆ ಅಂತ್ಯೋದಯ ಅನ್ನ ಯೋಜನೆ ಮತ್ತು ಆದ್ಯತಾ ಪಡಿತರ ಚೀಟಿಯ ಪ್ರತಿ ಫಲಾನುಭವಿಗೆ ಹೆಚ್ಚುವರಿ 05 ಕೆ.ಜಿ. ಆಹಾರ ಧಾನ್ಯದ ಬದಲಾಗಿ ಪ್ರತಿ ಕೆ.ಜಿ.ಗೆ ರೂ.34/-ರ ದರದಲ್ಲಿ ನಗದು ಹಣವನ್ನು ಪಡಿತರ ಫಲಾನುಭವಿಯ ಕುಟುಂಬದ ಮುಖ್ಯಸ್ಥರ ಬ್ಯಾಂಕ್ ಖಾತೆಗೆ DBT ಮೂಲಕ ವರ್ಗಾಯಿಸಲು ನಿರ್ಧರಿಸಲಾಗಿದೆ.
</td>
</tr>
<tr>
<td>೩</td>
<td>ಪ್ರತಿ ತಿಂಗಳು ವಿತರಿಸದಿರುವ ಅಕ್ಕಿಯನ್ನು ಯಾವ ರೀತಿಯಾಗಿ ಬಳಸಿಕೊಳ್ಳಲಾಗುತ್ತದೆ; ಬಡವರಿಗೆ ಸರ್ಕಾರವು ನೀಡುವ ಅಕ್ಕಿಯನ್ನು ನ್ಯಾಯಬೆಲೆ ಅಂಗಡಿಯ ಮಾಲೀಕರು ವಿತರಿಸದೆ ಬಡವರಿಗೆ ವಿತರಿಸಿದೆಯೆಂದು ಸರ್ಕಾರಕ್ಕೆ ತಪ್ಪು ಲೆಕ್ಕ ತೋರಿಸುವ ಮೂಲಕ ವಂಚಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ; ಈ ರೀತಿಯಾಗಿ ವಂಚಿಸುತ್ತಿರುವ ನ್ಯಾಯಬೆಲೆ ಅಂಗಡಿಯ ಮಾಲೀಕರ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ; ವಿಜಯಪುರ, ಬಾಗಲಕೋಟೆ, ಬೆಳಗಾವಿ ಜಿಲ್ಲೆಗಳಲ್ಲಿ</td>
<td>
ರಾಜ್ಯದಲ್ಲಿ ಪಡಿತರ ವಿತರಣೆಯನ್ನು ಸಂಪೂರ್ಣ ಗಣಕೀಕರಣಗೊಳಿಸಲಾಗಿದ್ದು, ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯನ್ವಯ ಹಾಗೂ ಕೇಂದ್ರ ಸರ್ಕಾರದ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ ಯನ್ವಯ ಎಲ್ಲಾ ನ್ಯಾಯಬೆಲೆ ಅಂಗಡಿಗಳಲ್ಲಿ Online ಮೂಲಕವೇ Aadhar Bio-metric ನೊಂದಿಗೆ ಪಡಿತರ ವಿತರಣೆಯನ್ನುಜಾರಿಗೊಳಿಸಲಾಗಿದೆ.
ತಿಂಗಳ ಅಂತ್ಯದಲ್ಲಿ ಯಾವುದೇ ಪಡಿತರ ಚೀಟಿದಾರರಿಗೆ Bio-metric ಮೂಲಕ ಪಡಿತರ ವಿತರಣೆ ಆಗದೇ ಉಳಿದಿರುವ ಅಂತಿಮ ದಾಸ್ತಾನನ್ನು ಮುಂದಿನ ತಿಂಗಳ ಆರಂಭಿಕ ದಾಸ್ತಾನಾಗಿ ಪರಿಗಣಿಸಿ ಮುಂದಿನ ತಿಂಗಳಿಗೆ ಆ ನ್ಯಾಯಬೆಲೆ ಅಂಗಡಿಗೆ ನೀಡುವ ಹಂಚಿಕೆ ಪ್ರಮಾಣದಲ್ಲಿ ಕಡಿತಗೊಳಿಸಲಾಗುತ್ತದೆ. ಈ ರೀತಿ ವಿತರಣೆಯಾಗದೇ ನ್ಯಾಯಬೆಲೆ ಅಂಗಡಿಗಳಲ್ಲಿ ಉಳಿಯುವ ದಾಸ್ತಾನನ್ನು ನ್ಯಾಯಬೆಲೆ ಅಂಗಡಿಯವರು
</td>
</tr>
</table>

| | | |
|---|---|---|
| | ಕಳೆದ 6 ತಿಂಗಳಿನಲ್ಲಿ ಈ ರೀತಿಯ ಎಷ್ಟು ಪ್ರಕರಣಗಳು ದಾಖಲಾಗಿವೆ; ಕೈಗೊಂಡ ಕ್ರಮಗಳೇನು; | ಸರ್ಕಾರಕ್ಕೆ ವಂಚಿಸಲು ಅವಕಾಶವಿರುವುದಿಲ್ಲ. ವಿಜಯಪುರ, ಬಾಗಲಕೋಟೆ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಕಳೆದ 6 ತಿಂಗಳುಗಳಲ್ಲಿ ಈ ರೀತಿಯ ಯಾವುದೇ ಪ್ರಕರಣಗಳು ದಾಖಲಾಗಿರುವುದಿಲ್ಲ. |
| ಈ | ಬಡವರಿಗೆ ಕಡಿಮೆ ದರದಲ್ಲಿ ಅಥವಾ ಉಚಿತವಾಗಿ ಅಕ್ಕಿಯನ್ನು ವಿತರಿಸಲು ಸರ್ಕಾರವು ಕಳೆದ 6 ತಿಂಗಳಿನಲ್ಲಿ ಎಷ್ಟು ವೆಚ್ಚ ಮಾಡಿದೆ; | ಅನ್ನಭಾಗ್ಯ/ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ ಅನ್ನ ಯೋಜನೆಯಡಿ ಉಚಿತವಾಗಿ ಅಕ್ಕಿಯನ್ನು ವಿತರಿಸಲು ಕಳೆದ 6 ತಿಂಗಳು (ಅಕ್ಟೋಬರ್ 2022 ರಿಂದ ಮಾರ್ಚ್ 2023 ರವರೆಗೆ) ರೂ. 142706.73 ಲಕ್ಷಗಳನ್ನು ವೆಚ್ಚ ಮಾಡಲಾಗಿರುತ್ತದೆ. |
| ಉ | ರಾಜ್ಯದಲ್ಲಿನ ಪ್ರತಿ ಕುಟುಂಬಕ್ಕೆ 10 ಅಕ್ಕಿ ನೀಡಿದರೆ ಇದಕ್ಕೆ ತಗುಲಬಹುದಾದ ಅಂದಾಜು ಮೊತ್ತ ಎಷ್ಟು?(ಸಂಪೂರ್ಣ ಮಾಹಿತಿ ನೀಡುವುದು) | ಒಂದು ತಿಂಗಳಿಗೆ ಪ್ರತಿಯೊಬ್ಬ ಅಂತ್ಯೋದಯ ಮತ್ತು ಆದ್ಯತಾ ಪಡಿತರ ಫಲಾನುಭವಿಗೆ ತಲಾ 10 ಕೆ.ಜಿ ಯಂತೆ ಅಕ್ಕಿ ವಿತರಿಸಲು NFSA ಹಂಚಿಕೆಯನ್ನು ಹೊರತುಪಡಿಸಿ ಹೆಚ್ಚುವರಿಯಾಗಿ 5 ಕೆ.ಜಿ ಅಕ್ಕಿಯನ್ನು ಮುಕ್ತ ಮಾರುಕಟ್ಟೆಯಲ್ಲಿ ಖರೀದಿಸಬೇಕಾಗುತ್ತದೆ. ಇದಕ್ಕಾಗಿ ಭಾರತ ಆಹಾರ ನಿಗಮದ OMSS ಅಕ್ಕಿ ದರದಂತೆ ಪ್ರತಿ ಕೆ.ಜಿ.ಗೆ ರೂ.34/- ರಂತೆ 1 ತಿಂಗಳಿಗೆ ಅಗತ್ಯವಿರುವ ಅಂದಾಜು 2.29 ಲಕ್ಷ ಮೆ.ಟನ್ ಅಕ್ಕಿ ಖರೀದಿಸಿ ವಿತರಿಸಲು ಸಾಗಾಣಿಕೆ ಮತ್ತು ಹ್ಯಾಂಡ್ಲಿಂಗ್ ವೆಚ್ಚ ಸೇರಿ ಅಂದಾಜು ರೂ.841.46 ಕೋಟಿಗಳ ಅನುದಾನದ ಅಗತ್ಯವಿದ್ದು, ವಾರ್ಷಿಕ ಮೊತ್ತ ರೂ.10,097.52 ಕೋಟಿಗಳ ಅನುದಾನದ ಅಗತ್ಯವಿದೆ. |

ಆನಾಸ 127 ಡಿಆರ್‌ಎ 2023 (ಇ-ಆಫೀಸ್)

(ಕೆ.ಹೆಚ್. ಮುನಿಯಪ್ಪ)

ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ

ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ

ಇಲಾಖಾ ಸಚಿವರು